OCTOBER 28, 2025

# AKASHAVANI - DHARWAD

# PRADESH SAMACHARA (KANNADA) 07.05 A.M.

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

<><><>

**ಮುಖ್ಯಾಂಶಗಳು:**

- **ಸಂಪದ್ಭರಿತ ಸಸ್ಯ ಸಂಕುಲ ಹೊಂದಿರುವ ಕರ್ನಾಟಕ ರಾಜ್ಯಕ್ಕೆ, ಪರಿಸರ ಸಂರಕ್ಷಣೆಯಲ್ಲಿ ದೇಶದಲ್ಲೇ ಮೊದಲ ಸ್ಥಾನ.**
- **ಇಂದಿನಿಂದ ರಾಜ್ಯಾದ್ಯಂತ, ಬೆಂಬಲ ಬೆಲೆ ಯೋಜನೆಯಡಿ, ಸೋಯಾಬಿನ್, ಸೂರ್ಯಕಾಂತಿ, ಹೆಸರುಕಾಳು ಖರೀದಿ ಆರಂಭ.**
- **ಕೇಂದ್ರ ವಿಚಕ್ಷಣಾ ಆಯೋಗದಿಂದ, ರಾಜ್ಯಾದ್ಯಂತ ಜಾಗೃತಿ ಅರಿವು ಸಪ್ತಾಹ ಅಭಿಯಾನಕ್ಕೆ ಚಾಲನೆ.**
- **'ಸೃಜನಶೀಲತೆಯ ಬೆಳಕು ಸದಾ ನಿಮ್ಮಲ್ಲಿ ಹೊಳೆಯಲಿ' ಎಂಬ ಧ್ಯೇಯದೊಂದಿಗೆ, ಇಂದು ಅಂತಾರಾಷ್ಟ್ರೀಯ ಆನಿಮೇಶನ್ ದಿನ.**

<><><>

**ಈಗ ವಾರ್ತೆಗಳ ವಿವರ**

<><><>

**ರಾಜ್ಯ ಸರ್ಕಾರವು ಕ್ರೀಡಾಕ್ಷೇತ್ರಕ್ಕೆ ವಿಶೇಷ ಒತ್ತು ನೀಡುತ್ತಿದ್ದು, ರಾಜ್ಯದಿಂದ ಅಂತಾರಾಷ್ಟ್ರೀಯ ಮಟ್ಟದಲ್ಲಿ ಸಾಧಕ ಕ್ರೀಡಾಳುಗಳು ಹೊರಹೊಮ್ಮಬೇಕಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು. ಮಂಗಳೂರಿನ ಉರ್ವದಲ್ಲಿ ಆಯೋಜಿತ ಚೀಫ್ ಮಿನಿಸ್ಟರ್ಸ್ ಮಂಗಳೂರು-ಇಂಡಿಯಾ ಇಂಟರ ನ್ಯಾಶನಲ್ ಚಾಲೆಂಜ್ 2025-ಅಂತಾರಾಷ್ಟ್ರೀಯ ಬ್ಯಾಡ್ಮಿಂಟನ್ ಕ್ರೀಡಾಕೂಟಕ್ಕೆ ಚಾಲನೆ ನೀಡಿ, ಅವರು ಮಾತನಾಡಿದರು. ಮಂಗಳೂರಿನಲ್ಲಿ ಮೊದಲ ಬಾರಿಗೆ ದೊಡ್ಡ ಮಟ್ಟದ ಪಂದ್ಯಾವಳಿ ಆಯೋಜನೆಗೊಂಡಿದ್ದು, ಹೆಮ್ಮೆಯ ವಿಷಯವಾಗಿದೆ ಎಂದರು.**

ಒಲಿಂಪಿಕ್ಸ್, ಪ್ಯಾರಾ ಒಲಿಂಪಿಕ್ಸ್ ಸೇರಿದಂತೆ ಅಂತಾರಾಷ್ಟ್ರೀಯ ಮಟ್ಟದ ಕ್ರೀಡಾಕೂಟದಲ್ಲಿ ಪದಕ ವಿಜೇತ ಕ್ರೀಡಾಪಟುಗಳಿಗೆ, ರಾಜ್ಯ ಸರ್ಕಾರದ ಇಲಾಖೆಗಳಲ್ಲಿ ಎ'ಗುಂಪಿನ ಹುದ್ದೆಗಳ ಜೊತೆ ಇತರೆ ಹುದ್ದೆಗಳನ್ನು ಮೀಸಲಿಡಲಾಗಿದೆ. ಪೊಲೀಸ್ ಇಲಾಖೆ ಹುದ್ದೆಗಳಲ್ಲಿ ಶೇಕಡ 2 ರಷ್ಟಿದ್ದ ಮೀಸಲಾತಿಯನ್ನು, ಶೇಕಡ 3 ಕ್ಕೆ ಹೆಚ್ಚಿಸಲಾಗಿದೆ ಎಂದರು. ಒಟ್ಟು 12 ದೇಶಗಳ 450 ಬ್ಯಾಡ್ಮಿಂಟನ್ ಆಟಗಾರರು ಸ್ಪರ್ಧಾ ಕಣದಲ್ಲಿದ್ದಾರೆ.

<><><>

ಸಂಪದ್ಭರಿತ ಅರಣ್ಯ ಹಾಗೂ ಅನೇಕ ಪ್ರಬೇಧದ ಸಸ್ಯ ಸಂಕುಲ ಹೊಂದಿರುವ ಕರ್ನಾಟಕ ರಾಜ್ಯ, ಪರಿಸರ ಸಂರಕ್ಷಣೆಯಲ್ಲಿ ದೇಶದಲ್ಲೇ ಮೊದಲ ಸ್ಥಾನದಲ್ಲಿದೆ ಎಂದು ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಖಾತೆ ಸಚಿವ ಈಶ್ವರ ಖಂಡ್ರೆ ಹೇಳಿದರು. ಮೈಸೂರು ಮಹಾರಾಜ ಕಾಲೇಜು ಮೈದಾನದಲ್ಲಿ ಆಯೋಜಿತ, ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ, 50 ನೇ ವರ್ಷದ ಸುವರ್ಣ ಮಹೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ರಾಜ್ಯ ಸರ್ಕಾರವು ಪರಿಸರ ಸಂರಕ್ಷಣೆಗೆ ಹೆಚ್ಚಿನ ಒತ್ತು ನೀಡಿದ್ದು, ಈಗಾಗಲೇ 11 ಕೋಟಿ ಸಸಿಗಳನ್ನು ನೆಡುವ ಮೂಲಕ ಹಸೀರಿಕರಣಕ್ಕೆ ಒತ್ತು ನೀಡಲಾಗಿದೆ ಎಂದರು. 'ಹಳ್ಳಿಗೊಂದು ಕೆರೆ, ಮನೆಗೊಂದು ಮರ' ಸಂಕಲ್ಪ ಸಾಕಾರಕ್ಕೆ ಎಲ್ಲರೂ  ಕೈ ಜೋಡಿಸಬೇಕಿದೆ ಎಂದರು.

<><><>

ಕೇಂದ್ರ ಸರ್ಕಾರದ ಬೆಂಬಲ ಬೆಲೆ ಯೋಜನೆಯಡಿ ಇಂದಿನಿಂದ ಸೋಯಾಬಿನ್, ಸೂರ್ಯಕಾಂತಿ, ಹೆಸರುಕಾಳು ಖರೀದಿ ಆರಂಭವಾಗಲಿದೆ ಎಂದು ಕೃಷಿ ಮಾರುಕಟ್ಟೆ ಖಾತೆ ಸಚಿವ, ಶಿವಾನಂದ ಪಾಟೀಲ್ ಹೇಳಿದರು. ಬೆಂಗಳೂರಿನಲ್ಲಿ ಮಾತನಾಡಿದ ಅವರು, ಸೋಯಾಬಿನ್ ಖರೀದಿಗೆ, 206 ಖರೀದಿ ಕೇಂದ್ರಗಳನ್ನು ತೆರೆಯಲಾಗಿದೆ, ಒಟ್ಟು 19 ಸಾವಿರದ 325 ಜನ ರೈತರು ತಮ್ಮ ಹೆಸರು ನೋಂದಾಯಿಸಿದ್ದಾರೆ ಎಂದರು. ಹೆಸರುಕಾಳು ಖರೀದಿಗೆ, 211 ಖರೀದಿ ಕೇಂದ್ರಗಳನ್ನು ಆರಂಭಿಸಲಾಗಿದೆ, 16 ಸಾವಿರದ 578 ಜನ ರೈತರು ಹೆಸರು ನೋಂದಣಿ ಮಾಡಿಕೊಂಡಿದ್ದು, ಧಾರವಾಡ ಜಿಲ್ಲೆಯಲ್ಲಿ ಅತಿ ಹೆಚ್ಚು 6 ಸಾವಿರದ 362 ಜನ ರೈತರು ಹೆಸರು ನೊಂದಾಯಿಸಿದ್ದಾರೆ. ಸೂರ್ಯಕಾಂತಿ ಖರೀದಿಗೆ 120 ಕೇಂದ್ರಗಳು ಹಾಗೂ ಉದ್ದಿನಕಾಳು ಖರೀದಿಗೆ 134 ಖರೀದಿ ಕೇಂದ್ರಗಳನ್ನು ಆರಂಭಿಸಲಾಗಿದೆ ಎಂದರು.

<><><>

ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ರಾಜ್ಯ ಸರ್ಕಾರ, ರೈತರು ಹಾಗೂ ಸಹಕಾರಿ ಕ್ಷೇತ್ರದ ಹಿತರಕ್ಷಣೆಗೆ ಒತ್ತು ನೀಡಿದೆ. ಸಹಕಾರಿ ಬ್ಯಾಂಕುಗಳ ಮೂಲಕ ಶೂನ್ಯ ಬಡ್ಡಿ ದರದಲ್ಲಿ ಕೃಷಿ ಸಾಲ ನೀಡಲಾಗುತ್ತಿದ್ದು, ಕರ್ನಾಟಕ ರಾಜ್ಯವು ಇತರೆ ರಾಜ್ಯಗಳಿಗೆ ಮಾದರಿಯಾಗಿದೆ ಎಂದು ಜವಳಿ, ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರಾದ ಶಿವಾನಂದ ಪಾಟೀಲ್ ಹೇಳಿದರು. ವಿಜಯಪುರ ತಾಲೂಕು, ಜಂಬಗಿ ಗ್ರಾಮದಲ್ಲಿ, ಗ್ರಾಮೀಣ ಕೃಷಿ ಸಹಕಾರಿ ಸಂಘದ ನೂತನ ಸಭಾಭವನ ಉದ್ಘಾಟಿಸಿ ಅವರು ಮಾತನಾಡಿದರು. ಕೃಷಿ ಕ್ಷೇತ್ರ ಹಾಗೂ ಗ್ರಾಮೀಣ ಅಭಿವೃದ್ಧಿಗೆ ಪೂರಕವಾಗಿರುವ ಸಹಕಾರಿ ರಂಗವನ್ನು ಬಲಪಡಿಸುವುದು ಎಲ್ಲರ ಕರ್ತವ್ಯವಾಗಿದೆ ಎಂದರು.

<><><>

ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು, ಇಂದು ಹೊಸದಿಲ್ಲಿಯ ಭಾರತ ಮಂಟಪಂ ನಲ್ಲಿ ಆಯೋಜಿತ ಅಂತಾರಾಷ್ಟ್ರೀಯ ಸೌರ ಒಕ್ಕೂಟ ಅಧಿವೇಶನದ, ಎರಡನೇ ದಿನದ ಸಭೆಯಲ್ಲಿ ಪಾಲ್ಗೊಂಡು ಭಾಷಣ ಮಾಡಲಿದ್ದಾರೆ. 'ಒಂದು ಸೂರ್ಯ, ಒಂದು ಜಗತ್ತು, ಒಂದು ಗುರಿ: ಹಸಿರು ಮತ್ತು ಸುಸ್ಥಿರ ಭವಿಷ್ಯದತ್ತ ಪಯಣ' ಎಂಬ ಧ್ಯೇಯದೊಂದಿಗೆ ಆಯೋಜಿತ, **8** ನೇ ಅಂತಾರಾಷ್ಟ್ರೀಯ ಸೌರ ಒಕ್ಕೂಟದ ಅಧಿವೇಶನದಲ್ಲಿ, ಒಟ್ಟು **120** ರಾಷ್ಟ್ರಗಳ **450** ಗಣ್ಯ ಪ್ರತಿನಿಧಿಗಳು ಪಾಲ್ಗೊಂಡಿದ್ದಾರೆ.

<><><>

**ಈಗ ವಾಣಿಜ್ಯ ಪ್ರಕಟಣೆ,**
**ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು..**
**(32 ಸೆಕೆಂದುಗಳು)**

<><><>

**ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..**

<><><>

**ಆಕಾಶವಾಣಿ ಸುದ್ದಿಗಳಿಗಾಗಿ, ನಮ್ಮ x ಖಾತೆ @airnews_Kannada ಹಾಗೂ**

**ನಮ್ಮ ಫೇಸ್ಬುಕ್ ಖಾತೆ Akashvani RNU Bengaluru-Dharwad ಅನುಸರಿಸಿ.**

<><><>

**ಸತರ್ಕತಾ ಸಪ್ತಾಹದ ಜಿಂಗಲ್ 30 ಸೆಕೆಂದುಗಳು**

<><><>

ಕೇಂದ್ರ ವಿಚಕ್ಷಣಾ ಆಯೋಗ – ಸೆಂಟ್ರಲ್ ವಿಜಿಲೆನ್ಸ್ ಕಮಿಷನ್, 'ಜಾಗರೂಕತೆ; ನಮ್ಮೆಲ್ಲರ ಸಹಭಾಗಿತ್ವದ ಹೊಣೆ' ಎಂಬ ಧ್ಯೇಯದೊಂದಿಗೆ, ನವೆಂಬರ್ **2**ನೇ ತಾರೀಖಿನ ವರೆಗೆ, 'ಜಾಗೃತಿ ಅರಿವು ಸಪ್ತಾಹ' ಆಯೋಜಿಸಿದೆ. ಭ್ರಷ್ಟಾಚಾರದ ಬಗ್ಗೆ ಎಚ್ಚರಿಕೆ, ಆಡಳಿತ ಹಾಗೂ ಸಾರ್ವಜನಿಕ ಸೇವೆಗಳಲ್ಲಿ, ಪಾರದರ್ಶಕತೆ, ಐಕ್ಯತೆ ಮತ್ತು ಸೇವಾ ತತ್ಪರತೆ ಖಾತ್ರಿ ಪಡಿಸುವ ಧ್ಯೇಯದೊಂದಿಗೆ, ಒಂದು ವಾರದ ಕಾಲ ರಾಜ್ಯದಲ್ಲಿ ಸಪ್ತಾಹವನ್ನು ಆಚರಿಸಲಾಗುತ್ತಿದೆ. ಬೆಂಗಳೂರು ನೈಋತ್ಯ ರೇಲ್ವೆ ವಿಭಾಗೀಯ ಕಚೇರಿಯಲ್ಲಿ ಆಯೋಜಿತ, ಜಾಗೃತಿ ಅರಿವು ಸಪ್ತಾಹ ಕಾರ್ಯಕ್ರಮದಲ್ಲಿ, ರೇಲ್ವೆ ವಿಭಾಗದ ಪ್ರಬಂಧಕ ಆಶುತೋಷ್ ಕುಮಾರ ಸಿಂಗ್ ಸಿಬ್ಬಂದಿಗೆ ಪ್ರತಿಜ್ಞಾ ವಿಧಿ ಬೋಧಿಸಿದರು. ಧಾರವಾಡದ ಆಲೂರು ವೆಂಕಟರಾವ್ ಸಭಾಭವನದಲ್ಲಿ ಆಯೋಜಿತ ಜಾಗೃತಿ ಅರಿವು ಸಪ್ತಾಹ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದ ಜಿಲ್ಲಾಧಿಕಾರಿ ದಿವ್ಯಾ ಪ್ರಭು, ಪ್ರಾಮಾಣಿಕತೆ, ಪಾರದರ್ಶಕತೆ, ವ್ಯಕ್ತಿಯ ವಯಕ್ತಿಕ ಹಾಗೂ ಸಾರ್ವಜನಿಕ ಜೀವನದಲ್ಲಿ ಮುಖ್ಯವಾಗಿವೆ. ಮಾನವೀಯತೆ ಹಾಗೂ ವೃತ್ತಿಪರತೆಯೊಂದಿಗೆ ಉತ್ತಮ ಆಡಳಿತ ಸಾಧ್ಯವಿದೆ ಎಂದರು. ಧಾರವಾಡ ಆಕಾಶವಾಣಿ ಕೇಂದ್ರದಲ್ಲಿ ಆಯೋಜಿತ ಕಾರ್ಯಕ್ರಮದಲ್ಲಿ ತಾಂತ್ರಿಕ ವಿಭಾಗದ ಉಪ ಮಹಾನಿರ್ದೇಶಕರಾದ ಅರುಣ್ ಪ್ರಭಾಕರ್ ಸಿಬ್ಬಂದಿಗೆ, ವಿಚಕ್ಷಣಾ ಜಾಗೃತಿ ಸಪ್ತಾಹದ ಅಂಗವಾಗಿ ಪ್ರತಿಜ್ಞಾ ವಿಧಿ ಬೋಧಿಸಿದರು.

<><><>

‘ಸೃಜನಶೀಲತೆಯ ಬೆಳಕು ಸದಾ ನಿಮ್ಮಲ್ಲಿ ಹೊಳೆಯಲಿ’ ಎಂಬ ಧ್ಯೇಯದೊಂದಿಗೆ ಇಂದು ಅಂತಾರಾಷ್ಟ್ರೀಯ ಆನಿಮೇಶನ್ ದಿನವನ್ನು ಆಚರಿಸಲಾಗುತ್ತಿದೆ. ಸಿನಿಮಾ ಕ್ಷೇತ್ರ, ಕಥಾ ನಿರೂಪಣೆಯಲ್ಲಿ ಆನಿಮೇಶನ್ ಪರಿಣತಿಯನ್ನು ಹೆಚ್ಚಾಗಿ ಬಳಸಲಾಗುತ್ತದೆ. ಈ ದಿನದಂದು ವಿಶ್ವಾದ್ಯಂತ ವಿನ್ಯಾಸಕರು ಹಾಗೂ ತಜ್ಞರ ಕೌಶಲ, ಸಮರ್ಪಣೆ ಹಾಗೂ ತಂತ್ರಜ್ಞಾನದ ನಾವೀನ್ಯತೆಯನ್ನು ಸ್ಮರಿಸಿ ಗೌರವಿಸಲಾಗುತ್ತದೆ. ಅಂತಾರಾಷ್ಟ್ರೀಯ ಆನಿಮೇಶನ್ ದಿನದ ಮಹತ್ವದ ಬಗ್ಗೆ ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ಬೆಂಗಳೂರು, ಅರೇನಾ ಆನಿಮೇಶನ್ ಸಂಸ್ಥೆ ನಿರ್ದೇಶಕ ಹಾಗೂ ವೇದಾತ್ಮ ಕಾಲೇಜ ಆಫ್ ಡಿಸೈನ್ ಟೆಕ್ನಾಲಜಿ ಅಂಡ್ ಮ್ಯಾನೆಜಮೆಂಟ್ ಸಂಸ್ಥೆ ಅಧ್ಯಕ್ಷರಾದ ಬಿ.ಎಸ್ ಶ್ರೀನಿವಾಸ...

<><><>

ಧ್ವನಿ: ಬಿ.ಎಸ್ ಶ್ರೀನಿವಾಸ್ 75 ಸೆಕೆಂದುಗಳು

<><><>

ದೇಶದ ಪೂರ್ವ ಕರಾವಳಿಯಲ್ಲಿ ಅಪ್ಪಳಿಸಿರುವ ಮೊಂಥಾ ಚಂಡಮಾರುತದ ಹಿನ್ನೆಲೆ, ಇಂದು ಭುವನೇಶ್ವರ–ಕೆಎಸ್ಸಾರ್ ಬೆಂಗಳೂರು ಎಕ್ಸಪ್ರೆಸ್ ರೈಲು ಹಾಗೂ ನಾಳೆ ಬೆಂಗಳೂರಿನಿಂದ–ಭುವನೇಶ್ವರ ತೆರಳಬೇಕಿದ್ದ ಕೆಸ್ಸಾರ್ ಬೆಂಗಳೂರು–ಭುವನೇಶ್ವರ ಎಕ್ಸಪ್ರೆಸ್ ರೈಲು ಸೇವೆಯನ್ನು ಸ್ಥಗಿತಗೊಳಿಸಲಾಗಿದೆ ಎಂದು ನೈಋತ್ಯ ರೇಲ್ವೆ ಇಲಾಖೆ ಅಧಿಕೃತರು ತಿಳಿಸಿದ್ದಾರೆ. ಇಂದು ಸರ್ ಎಂ. ವಿಶ್ವೇಶ್ವರಾಯ ಟರ್ಮಿನಲ್ ಮೂಲಕ ತೆರಳುವ ಬೆಂಗಳೂರು–ಹಾತಿಯಾ ಎಕ್ಸಪ್ರೆಸ್ ರೈಲು, ಚಂಡಮಾರುತದ ಹಿನ್ನೆಲೆ ವಿಜಯವಾಡ, ವಾರಂಗಲ್, ಬಿಲ್ಲಾಪುರ ಜಂಕ್ಷನ್, ಜಾರ್ಸುಘಡ ಜಂಕ್ಷನ್ ಮೂಲಕ ಸಾಗಲಿದೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

- ಸಂಪದ್ಭರಿತ ಸಸ್ಯ ಸಂಕುಲ ಹೊಂದಿರುವ ಕರ್ನಾಟಕ ರಾಜ್ಯಕ್ಕೆ, ಪರಿಸರ ಸಂರಕ್ಷಣೆಯಲ್ಲಿ ದೇಶದಲ್ಲೇ ಮೊದಲ ಸ್ಥಾನ.
- ಇಂದಿನಿಂದ ರಾಜ್ಯಾದ್ಯಂತ, ಬೆಂಬಲ ಬೆಲೆ ಯೋಜನೆಯಡಿ, ಸೋಯಾಬಿನ್, ಸೂರ್ಯಕಾಂತಿ, ಹೆಸರುಕಾಳು ಖರೀದಿ ಆರಂಭ.
- ಕೇಂದ್ರ ವಿಚಕ್ಷಣಾ ಆಯೋಗದಿಂದ, ರಾಜ್ಯಾದ್ಯಂತ ಜಾಗೃತಿ ಅರಿವು ಸಪ್ತಾಹ ಅಭಿಯಾನಕ್ಕೆ ಚಾಲನೆ
- ‘ಸೃಜನಶೀಲತೆಯ ಬೆಳಕು ಸದಾ ನಿಮ್ಮಲ್ಲಿ ಹೊಳೆಯಲಿ’ ಎಂಬ ಧ್ಯೇಯದೊಂದಿಗೆ, ಇಂದು ಅಂತಾರಾಷ್ಟ್ರೀಯ ಏನಿಮೇಶನ್ ದಿನ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>